**O.S .No. 494/2015**
**PW-1**

ದಿನಾಂಕ: 18-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀಸವಾಲು **6** ನೇ ಪ್ರತಿವಾದಿ ಪರ ಶ್ರೀ ಆರ್.ಎಸ್.ಎಂ. ವಕೀಲರಿಂದಃ</u>

ನೀವು 1 ನೇ ಪ್ರತಿವಾದಿಯ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ನೀವು 1 ನೇ ಪ್ರತಿವಾದಿಯ ವಾರಸುದಾರರು ಎಂದು ತೋರಿಸಲು ನ್ಯಾಯಾಲಯದ ಮುಂದೆ ಏನು ದಾಖಲಾತಿ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಜಮೀನಿನ ದಾಖಲಾತಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಜಮೀನಿನ ದಾಖಲಾತಿಯಲ್ಲಿ ನಿಮಗೂ ಹಾಗೂ ನಿಮ್ಮ ತಂದೆಯ ಸಂಬಂಧದ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ಪ್ರಸ್ತುತ 40 ವರ್ಷ ವಯಸ್ಸಾಗಿರುತ್ತದೆ. ದಾವೆ ಹೂಡುವ ಸಮಯದಲ್ಲಿ ನನಗೆ 30 ವರ್ಷ ವಯಸ್ಸಾಗಿತ್ತು. ದಾವಾ ಆಸ್ತಿಗಳಲ್ಲಿ ದಾವೆ ಹೂಡುವ ಕಾಲಕ್ಕೆ ಅನ್ಯಕ್ರಾಂತ ಮಾಡಲಾಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ 6 ನೇ ಪ್ರತಿವಾದಿ ಈಗ ಪೆಟ್ರೋಲ್ ಬಂಕ್ ಸ್ಥಾಪನೆ ಮಾಡಿದ್ದಾರೆಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 6 ನೇ ಪ್ರತಿವಾದಿ ಪೆಟ್ರೋಲ್ ಬಂಕ್ ಸ್ಥಾಪನೆ ಮಾಡಿರುವ ವಿಚಾರ ನಿಮಗೆ ದಾವೆ ಹೂಡುವ ಪೂರ್ವದಿಂದಲೇ ಗೊತ್ತಿತ್ತು ಎಂದರೆ ಸಾಕ್ಷಿ ದಾವೆ ಹೂಡುವ 2 ತಿಂಗಳ ಮುಂಚೆ ಗೊತ್ತಾದ ಮೇಲೆ ದಾವೆ ಹೂಡಿರುತ್ತೇನೆ ಎಂದು ಹೇಳುತ್ತಾರೆ.

ದಾವಾ ತಪಶೀಲು ಆಸ್ತಿ ಸಂ.1 ನ್ನು 2004-05 ರಲ್ಲೇ ಅನ್ಯಕ್ರಾಂತ ಮಾಡಿ ಭೂ ಪರಿವರ್ತನೆ ಮಾಡಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

(ಈ ಹಂತದಲ್ಲಿ 6 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ

ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಸಕಾರಣ ಇಲ್ಲದೇ ಇರುವುದರಿಂದ ಮುಂದುವರೆದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.